ಇಂದು ಜಗತ್ತಿನಲ್ಲಿ ಅತಿರೇಕದ ವಾದಗಳೇ ಹೆಚ್ಚು ಕೇಳಿಸುತ್ತಿವೆ. ಈ ಅತಿರೇಕಗಳ ರೂಪಗಳು ಹಲವು. ಕೆಲವರಿಗೆ ವಿಜ್ಞಾನವಷ್ಟೆ ಸತ್ಯ; ಮತ್ತೆ ಕೆಲವರಿಗೆ ಧಾರ್ಮಿಕತೆಯಷ್ಟೆ ಸತ್ಯ. ವಿಜ್ಞಾನವೇ ಸತ್ಯ ಎಂದು ಹಟ ಮಾಡುತ್ತಿರುವವನಿಗೆ ಧರ್ಮವನ್ನು ನೋಡು ಎಂದು ಹೇಳಬೇಕಾಗಿದೆ; ಬರಿಯ ಧಾರ್ಮಿಕತೆಯ ಆಚರಣೆಯಲ್ಲಿಯೇ ಮೈಮರೆತವನಿಗೆ ವೈಜ್ಞಾನಿಕತೆಯನ್ನೂ ಗಮನಿಸು ಎಂದು ತಿಳಿಸಬೇಕಾಗಿದೆ. ಎರಡು ವಿರುದ್ಧಕೇಂದ್ರಗಳಲ್ಲಿ ಮಾತನಾಡುತ್ತಿರುವ ಮೇಲಿನ ಎರಡು ಝೆನ್‌ಪದ್ಯಗಳ ನಿಲುವಾದರೂ ಇಂಥದ್ದೇ. ಬುದ್ಧಿಯೇ ದೊಡ್ಡದು ಎನ್ನುವವನಿಗೆ ಭಾವನೆಗೂ ಬೆಲೆ ಇದೆ ಎಂದು ಎಚ್ಚರಿಸುವುದು; ಭಾವನೆಯಲ್ಲಿಯೇ ಕೊಚ್ಚಿಹೋಗುತ್ತಿರುವವನಿಗೆ ಬುದ್ಧಿಯ ಮಹತ್ವವನ್ನು ಮನಗಾಣಿಸುವುದು. ಹೊರಗಿನ ಸಿರಿತನದಲ್ಲಿಯೇ ಈಜಾಡುತ್ತಿರವವನಿಗೆ ಅಂತರಂಗದ ಶ್ರೀಮಂತಿಕೆಯನ್ನು ಪರಿಚಯಿಸುವುದು; ಒಳಗಿನ ಭಾವದಲ್ಲಿಯೇ ಅಂಟಿಕೊಂಡವನಿಗೆ ಬಾಹ್ಯಜಗತ್ತನ್ನು ಪರಿಚಯಿಸುವುದು. ಒಟ್ಟಿನಲ್ಲಿ ಅತಿರೇಕಗಳಿಂದ ನಮಗೆ ಬಿಡುಗಡೆಯನ್ನು ಕೊಡಿಸಿ, ಸಾಮರಸ್ಯದ ಜೀವನದ ಬಗ್ಗೆ ನಮ್ಮ ಅರಿವನ್ನು ಕ್ರಿಯಾಶೀಲಗೊಳಿಸಬಲ್ಲಂಥವು ಈ ಎರಡು ಪದ್ಯಗಳು.

★ ★ ★

## ನಮ್ಮದಾಗಿರುವ ಎಲ್ಲವೂ ನಮ್ಮದಲ್ಲದುದರಿಂದ ನಾಶ!

ವಿದ್ಯಾರ್ಥಿಯೊಬ್ಬ ಝೆನ್‌ಗುರು ಬಾಂಕೈ ಹತ್ತಿರ ಬಂದು ತನ್ನ ಅಳಲನ್ನು ತೋಡಿಕೊಂಡ:

'ಗುರುಗಳೇ, ನನಗೆ ವಿಪರೀತು ಸಿಟ್ಟು ಬರುತ್ತದೆ; ಅದನ್ನು ಹೇಗೆ ಗೆಲ್ಲುವುದು?'

ಆಗ ಬಾಂಕೈ ಕೇಳಿದರು:

'ಹೌದೆ! ಇದೇನೋ ವಿಚಿತ್ರವಾಗಿದೆಯಲ್ಲ? ಎಲ್ಲಿ ನಿನ್ನ ಕೋಪವನ್ನು ತೋರಿಸು ನೋಡೋಣ?'

'ಈಗ ತೋರಿಸಲಾಗದು ಗುರುಗಳೆ!' ಶಿಷ್ಯ ಉತ್ತರಿಸಿದ.

'ಹಾಗಾದರೆ ಯಾವಾಗ ತೋರಿಸುವೆ?' ಗುರುಗಳು ಪ್ರಶ್ನಿಸಿದರು.

'ಅದು ಯಾವ ಸಮಯದಲ್ಲೋ ಇದ್ದಕ್ಕಿದ್ದಂತೆ ಪ್ರಕಟವಾಗಿಬಿಡುತ್ತೆ ಗುರುಗಳೆ!'

ಇದು ಶಿಷ್ಯನ ಉತ್ತರ.

ಗುರುಗಳು ಸಮಾಧಾನವಾಗಿ ಹೇಳಿದರು:

'ಹಾಗಾದರೆ ಅದು ನಿನ್ನದು ಅಲ್ಲ ಎಂದಾಯ್ತು. ಅದು ನಿನ್ನದೇ ಆಗಿದಿದ್ದರೆ ನೀನು ಯಾವಾಗ ಬೇಕಿದ್ದರೂ ನನಗೆ ಅದನ್ನು ತೋರಿಸಬಹುದಾಗಿತ್ತು. ನೀನು ಹುಟ್ಟಿದಾಗ ಅದು ನಿನ್ನೊಂದಿಗೆ ಹುಟ್ಟಲಿಲ್ಲ. ನಿನ್ನ ಹೆತ್ತವರೂ ಅದನ್ನು ನಿನಗೆ ಕೊಡಲಿಲ್ಲ. ನಿನ್ನ ಕೋಪದ ಬಗ್ಗೆ ಇನ್ನೊಮ್ಮೆ ಯೋಚಿಸಿ ನೋಡು.'

ನಮ್ಮಲ್ಲದ ಎಷ್ಟೋ ಸಂಗತಿಗಳನ್ನು ಅವು ನಮ್ಮದೇ ಎಂದು ಭಾವಿಸಿಕೊಳ್ಳುತ್ತೇವೆ; ಅವನ್ನು ಹೊತ್ತು ತಿರುಗುತ್ತ ಜೀವನದುದ್ದಕ್ಕೂ ನರಳುತ್ತಿರುತ್ತೇವೆ. ನಮ್ಮ ಇಂಥ ದಡ್ಡತನದ ಬಗ್ಗೆ ಈ ಝೆನ್‌ಕಥೆ ಎಚ್ಚರಿಸುತ್ತಿದೆ.

ಮನುಷ್ಯನ ಮಹಾಶತ್ರುಗಳಲ್ಲಿಯೇ ಮಹಾಶತ್ರು ಕೋಪ. ಇದರಿಂದ ಆಗುವ ಅನಾಹುತಗಳು ಅಷ್ಟಿಷ್ಟಲ್ಲ. ಸ್ನೇಹ, ಪ್ರೀತಿ, ಆಸ್ತಿ, ಕೀರ್ತಿ, ಆರೋಗ್ಯ, ನೆಮ್ಮದಿ, ಕೊನೆಗೆ ನಮ್ಮ